ದಿನಾಂಕಃ 11-12-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲು 1 ಮತ್ತು 2 ನೇ ಪ್ರತಿವಾದಿ ಪರ ವಕೀಲರಾದ ಶ್ರೀ. ಎನ್ ಎ ಆರ್ ವಕೀಲರಿಂದ

ಯಾವುದಕ್ಕೋಸ್ಕರ ದಾವೆಯನ್ನು ಸಲ್ಲಿಸಿರುತ್ತೀರಿ ಎಂದರೆ ಸಾಕ್ಷಿಯು ದಾರಿಗೋಸ್ಕರ ಎಂದು ನುಡಿಯುತ್ತಾರೆ. ಯಾವ ಕಾಡೆಯಿಂದ ಯಾವ ಕಡೆಗೆ ಎಂದರೆ ಪೂರ್ವದಿಂದ ಪಶ್ಚಿಮಕ್ಕೆ . ಎಷ್ಟು ಅಡಿ ಇದೆ ಎಂದರೆ ಮೊದಲಿನಿಂದಲೂ ದಾರಿ ಇದೆ ನಾವು ಅಳತೆ ಮಾಡಿರುವುದಿಲ್ಲ. ಪಶ್ಚಿಮದ ದಿಕ್ಕಿಗೆ ನಮ್ಮ ಸೈಟು ಮತ್ತು ಜಮೀನು ಇದ್ದು ಅಲ್ಲಿಗೆ ಹೋಗಲು ಈ ರಸ್ತೆ ಇರುತ್ತದೆ. ಆ ರಸ್ತೆಗೆ ಚೆಕ್ಕುಬಂದಿ ಗೊತ್ತು ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಸರ್ವೆ ನಂಬರ್ 185, ಆ ರಸ್ತೆಯ ಉತ್ತರಕ್ಕೆ ರೋಡ್ ಮತ್ತು ಸೀತಾರಾಮಯ್ಯ ಜಮೀನು, ದಕ್ಷಿಣಕ್ಕೆ ರೋಡ್ ಮತ್ತು ನರಸಿಂಹಮೂರ್ತಿ.

ರಸ್ತೆ ಇದೆ ಅಂತ ತೋರಿಸಲು ದಾಖಲೆ ಇದೆಯಾ ಎಂದರೆ ಸಾಕ್ಷಿಯು ನಮ್ಮ ತಾತನ ಕಾಲದಿಂದಲೂ ಆ ರಸ್ತೆಯಲ್ಲಿ ಓಡಾಡುತ್ತಿದ್ದೇವೆ. ರಸ್ತೆ ಇದೆ ಅಂತ ತೋರಿಸಲು ಯಾವುದೇ ದಾಖಲೆ ನೀಡಿರುವುದಿಲ್ಲ ಎಂದರೆ ಯಾವ ದಾಖಲೆ ಇದೆಯೋ ಅದನ್ನು ನೀಡಿರುತ್ತೇನೆ. ಆ ರಸ್ತೆ ಯಾರಿಗೆ ಸೇರಿದೆ ಎಂದರೆ ಸರ್ಕಾರದ ರಸ್ತೆ ಎಂದು ನುಡಿಯುತ್ತಾರೆ. ಸರ್ಕಾರಿ ಜಾಗ ಅಂತ ತೋರಿಸಲ ಯಾವುದೇ ದಾಖಲೆ ನೀಡಿರುತ್ತೀರಾ ಎಂದರೆ ಮೊದಲಿನಿಂದಲೂ ಆ ರಸ್ತೆಯಲ್ಲಿ ಓಡಾಡುತ್ತಿರುತ್ತೇವೆ. ನಾರಾಯಣಮ್ಮ ಮತ್ತು ಲಲಿತಮ್ಮ ಈ ರಸ್ತೆಯ ಉತ್ತರಕ್ಕೆ ಇರುತ್ತದೆ. ನಾರಾಯಣಮ್ಮ ಮತ್ತು ಲಲಿತಮ್ಮ ಮನೆ ಎಲ್ಲಿ ಬರುತ್ತದೆ ಎಂದರೆ ರಸ್ತೆಯಿಂದ ಉತ್ತರಕ್ಕೆ ಬರುತ್ತದೆ ಬೇಲಿ ಗಿಡಗಳು ನಂತರ ಉತ್ತರಕ್ಕೆ ಪ್ರತಿವಾದಿ 1 ಮತ್ತು 2 ರವರ ಮನೆ ಬರುತ್ತದೆ. ರಸ್ತೆಯ ಉತ್ತರಕ್ಕೆ ಕಲ್ಲಿನ ಕೂಚಗಳು ನೆಟ್ಟಿರುತ್ತಾರೆ ಎಂದರೆ ಸಾಕ್ಷಿಯು ಮೊದಲಿನಿಂದಲೂ ಅಲ್ಲಿಯೇ ಇರುತ್ತದೆ ನೆಟ್ಟಿರುವುದು ಅಲ್ಲ. ಮನೆಯ ಉತ್ತರಕ್ಕೆ ಕಲ್ಲು ಚಪ್ಪಡಿಗಳು ಇದೆ. ಕಲ್ಲಿನ ಚಪ್ಪಡಿಯ ಪಕ್ಕದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ನೆಟ್ಟಿರುವ ಕಲ್ಲುಗಳು ಇರುತ್ತವೆ ಎಂದರೆ ಸರಿಯಲ್ಲ. ರಸ್ತೆಯ ದಕ್ಷಿಣಕ್ಕೆ ನರಸಿಂಹಮೂರ್ತಿ ರವರ ಮನೆ ಇದೆ. ಬೇಲಿಯಾದ ನಂತರ ದಕ್ಷಿಣಕ್ಕೆ ಪ್ರತಿವಾದಿ 3 ಮತ್ತು 4 ರವರ ಮನೆ ಮತ್ತು

ಖಾಲಿ ಜಾಗ ಮತ್ತು ಪ್ರತಿವಾದಿ 1 ಮತ್ತು 2 ರವರ ಮನಗೆಳ ಮದ್ಯೆ ಪೂರ್ವ ಪಶ್ಚಿಮ ಯಾವುದೇ ರಸ್ತೆ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 1 ಮತ್ತು 2 ರವರು ನಿಮಗೆ ಯಾವುದೇ ತೊಂದರೆ ಮಾಡಿರುವುದಿಲ್ಲ ಮತ್ತು ಅಲ್ಲಿ ಯಾವುದೇ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಮನೆಗೆ ಕಲ್ಲಿನ ಕೂಚಗಳು ನೆಟ್ಟಿಟದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ನೀವು ದಾವೆಯನ್ನು ರಸ್ತೆಗಾಗಿ ಮಾತ್ರ ಹಾಕಿರುತ್ತೀರೋ ಅಥವಾ ಸೈಟಿಗಾಗಿ ಹಾಕಿರುತ್ತಿರೋ ಎಂದರೆ ರಸ್ತೆಗಾಗಿ ಮಾತ್ರ ಎಂದು ನುಡಿಯುತ್ತಾರೆ ನೀವು ರಸ್ತೆಗಾಗಿ ದಾವೆಯನ್ನು ಹಾಕಿರುವುದಿಲ್ಲ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪಶ್ಚಿಮಕ್ಕೆ ಸೀತಾರಾಮಯ್ಯ ನವರ ಜಮೀನು ಅಂತ ಹೇಳಿದ್ದು ಸೀತಾರಾಮಯ್ಯ ಎಂದರೆ ಪ್ರತಿವಾದಿ 1 ರವರ ಮಗ, ಪ್ರತಿವಾದಿ 2 ರವರ ಗಂಡ ಎಂದರೆ ಸರಿ. ಅವರಿಗೆ ಆ ಸ್ವತ್ತನ್ನು ನೀವೇ ಮಾರಿರುತ್ತೀರಾ ಎಂದರೆ ಸರಿ. ನಿಮ್ಮ ಕ್ರಯ ಪತ್ರದ ಪ್ರಕಾರ ನೀವು ತಪ್ಪು ಚೆಕ್ಕುಬಂದಿಯನ್ನು ನೀಡಿರುತ್ತೀರಿ ಎಂದರೆ ಸರಿಯಲ್ಲ. ಅದೇ ರೀತಿ ರಸ್ತೆಗೂ ನೀವು ತಪ್ಪು ಚೆಕ್ಕುಬಂದಿ ನೀಡಿರುತ್ತೀರಿ ಎಂದರೆ ರಸ್ತೆಗಾಗಿ ನಾನು ದಾವೆ ಹಾಕಿರುತ್ತೇನೆ. ಅಲ್ಲಿ ಯಾವುದೇ ರಸ್ತೆ ಇಲ್ಲ ನೀವು ಯಾವಾಗಲೂ ಓಡಾಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 1 ಮತ್ತು 2 ರವರ ಮನೆ ಅಂತ ಹೇಳಿದ್ದು ಆ ಮನೆ ಯಾವ ಹೆಸರಿನಲ್ಲಿ ಇದೆ ಎಂದರೆ ನಾರಾಯಣಮ್ಮ ಹೆಸರಿನಲ್ಲಿ. ನಾರಾಯಣಮ್ಮ ಹೆಸರಿನಲ್ಲಿ ಇದ್ದು ಪಂಚಾಯ್ತಿಯಲ್ಲಿ ಎಲ್ಲಾ ದಾಖಲೆಗಳು ಅವರ ಹೆಸರಿನಲ್ಲಿ ಇದೆ ಎಂದರೆ ಅದು ನಾರಾಯಣಮ್ಮನವರದ್ದೆ. 1 ಮತ್ತು 2 ಪ್ರತಿವಾದಿಯರ ಅಕ್ಕ ಪಕ್ಕದಲ್ಲಿ ನೀವು ಇಲ್ಲ ಯಾವುದೇ ಆಸ್ತಿಯ ಮಾಲೀಕರು ಅಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ಕಾಂಪೌಂಡ್ ನಲ್ಲಿ ತೆಂಗಿನ ಮರ ಮತ್ತು ಹೂವಿನ ಗಿಡಗಳು ಹಾಕಿರುತ್ತಾರೆ ಎಂದರೆ ಬೇಲಿ ಗಿಡ ಹಾಕಿರುತ್ತಾರೆ. ಪ್ರತಿವಾದಿ 1 ಮತ್ತು 2 ರವರು ಅವರಿಗೆ ಎಷ್ಟು ಜಾಗ ಇದೆಯೋ ಅಷ್ಟರಲ್ಲಿ ತೆಂಗಿನ ಮರಗಳನ್ನು ನೆಟ್ಟಿರುತ್ತಾರೆ. ಅವರ ಮನೆ ಪಕ್ಕದಲ್ಲಿ ಹೂವಿನ ಗಿಡಗಳು ಇರುತ್ತದೆ. ಆ ಹೂ ಗಿಡಗಳನ್ನು ಹಾಕಿರುವುದಕ್ಕೆ ಕಾಂಪೌಂಡ್ ಹಾಕಿರುತ್ತಾರೆ ಎಂದರೆ ಕಾಂಪೌಂಡ್ ಇಲ್ಲ ಬೇಲಿ ಗಿಡಗಳು ಇರುತ್ತದೆ. ಎಲ್ಲಾ ದಾಖಲೆಗಳು ಅವರ ಹೆಸರಿನಲ್ಲಿ ಇದೆ ನನಗೆ ಗೊತ್ತಿಲ್ಲ. ನೀವು ಹಾಜರುಮಾಡಿರುವ

ದಾಖಲೆಗಳು ಪಂಚಾಯ್ತಿಯಲ್ಲಿ ಸೃಷ್ಟಿಮಾಡಿಕೊಂಡು ಸುಳ್ಳು ದಾವೆಯನ್ನು ಹಾಕಿರುತ್ತೀರಾ ಎಂದರೆ ಸರಿಯಲ್ಲ.

ನೀವು ಸರ್ವೆ ನಂಬರ್ ನಲ್ಲಿ ಮನೆ ಕಟ್ಟಿಕೊಂಡಿರುತ್ತೀರಿ ಎಂದರೆ ಸರಿ. ಸಾಕ್ಷಿ ಮುಂದುವರಿದು ಸೈಟ್ ನ ಪಕ್ಕದಲ್ಲಿ ಸರ್ವೆ ನಂ.185 ಇದೆ. ಮನೆ ಕಟ್ಟಲು ಪರವಾನಗಿ ಪಡೆದಿದ್ದಿರಾ ಎಂದರೆ ಸರ್ಕಾರದಿಂದ ಮನೆ ಕೊಟ್ಟಿರುತ್ತಾರೆ. ಸರ್ವೆ ನಂಬರ್ ಪ್ಕದಲ್ಲಿ ಎಷ್ಟು ದೂರದಲ್ಲಿ ಮನೆ ಇದೆ ಎಂದರೆ ಅಳತೆ ಮಾಡಿರುವುದಿಲ್ಲ. ಸೀತಾರಾಮಯ್ಯ ಜಮೀನಿನ ಆದ ನಂತರ ನಿಮ್ಮದು ಎಂದರೆ ಅಲ್ಲ. ಸೈಟ್ ಪಕ್ಕದಲ್ಲಿ ಯಾವುದೇ ಮನೆ ಇರುವುದಿಲ್ಲ ಎಂದರೆ ಸರಿಯಲ್ಲ. ಅದು ಯಾವ ಪಂಚಾಯ್ತಿ ಎಂದರೆ ಮಿಟ್ಟಹಳ್ಳಿ ಪಂಚಾಯ್ತಿ. ಆ ಪಂಚಾಯ್ತಿಗೆ ನೀವು ಸಧಸ್ಯರಾಗಿದ್ದರಾ ಎಂದರೆ 15 ವರ್ಷದ ಹಿಂದೆ ಸಧಸ್ಯನಾಗಿದ್ದೆ. ಪಂಚಾಯ್ತಿ ಸಧಸ್ಯನಾಗಿ 5 ವರ್ಷ ಇದ್ದೆ. ಪ್ರತಿವಾದಿ 1 ಮತ್ತು 2 ರವರಿಗೆ ಗಂಡು ಮಕ್ಕಳಿಲ್ಲದ ಕಾರಣ ಅವರಿಗೆ ತೊಂದರೆ ಕೊಡಬೇಕು ಅಂತ ಈ ದಾವೆ ಹಾಕಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅವರು ಬೇರೆ ಪಕ್ಷ ನಾವು ಬೇರೆ ಪಕ್ಷ, ಅವರು ಬಲಿಷ್ಟರಾಗಿರುತ್ತಾರೆ ಎಂದು ನುಡಿಯುತ್ತಾರೆ. ಶ್ರೀರಾಮರೆಡ್ಡಿ ರವರದ್ದು ನಂದನವನ. ಸ್ವತ್ತು ಇರುವುದು ನಂದನಹೊಸಹಳ್ಳಿ ಶ್ರೀರಾಮರೆಡ್ಡಿ ಊರಿಗೆ ಮತ್ತು ನಂದನಹೊಸಹಳ್ಳಿಗೆ ಮೂರು ಕಿ. ಮೀ. ಆಗುತ್ತದೆ. ಶ್ರೀರಾಮರೆಡ್ಡಿ ಯವರು ಗಾರಮ ಪಂಚಾಯ್ತಿ ಸಧಸ್ಯರಲ್ಲ ಎಂದರೆ ಸರಿಯಲ್ಲ. ಅವರು ಜಿಲ್ಲಾ ಪಂಚಾಯ್ತಿ ಸಧಸ್ಯರು. ಜಿಲ್ಲಾ ಪಂಚಾಯ್ತಿ ಸಧಸ್ಯರಲ್ಲ ಎಂದರೆ ಮೊದಲು ಆಗಿರುತ್ತಾರೆ. ಪ್ರತಿವಾದಿ 1 ರವರಿಗೆ ವಯಸ್ಸಾಗಿದ್ದು ಓಡಾಡಲು ಆಗುವುದಿಲ್ಲ ಎಂದರೆ ಸರಿ. ಅವರ ಮಕ್ಕಳು ಬೆಂಗಳೂರಿನಲ್ಲಿ ಇರುತ್ತಾರೆ. ಪ್ರತಿವಾದಿ 1 ರವರು ನಿಮಗೆ ಯಾವುದೇ ತೊಂದರೆ ಕೊಟ್ಟಿರುವುದಿಲ್ಲ ಅವರ ಆಸ್ತಿಯನ್ನು ಕಬಳಿಸಬೇಕು ಅಂತ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀಸವಾಲುಃ ಪ್ರತಿವಾದಿ 3 ಮತ್ತು 4 ರವರ ಪರ ಶ್ರೀ ಬಿ ಆರ್ ಎಸ್ ವಕೀಲರಿಂದಃ

ನರಸಿಂಹಮುರ್ತಿ ರವರು ಏನು ತಕರಾರು ಹಾಕಿರುತ್ತಾರೆ ಅಂತ ಗೊತ್ತ ಎಂದರೆ ಗೊತ್ತು ದಾರಿ ಇಲ್ಲ ಅಂತ ಹಾಕಿರುತ್ತಾರೆ. ನರಸಿಂಹಮುರ್ತಿ ರವರಿಗೆ ಇರುವ ಜಾಗವನ್ನು ನಾವು ಅಳತೆ ಮಾಡಿರುವುದಿಲ್ಲ. ದಾವೆ ಹಾಕಿದ ನಂತರ ಪಂಚಾಯ್ತಿ ಖಾತೆಯಲ್ಲಿ ನರಸಿಂಹಮುರ್ತಿ ರವರಿಗೆ ಎಷ್ಟು ಅಳತೆಯ ಖಾತೆ ಇದೆ ಅಂತ ಅಳತೆ ಮಾಡಿರುವುದಿಲ್ಲ. ನಿಮ್ಮ ಪ್ರಕಾರ ನರಸಿಂಹಮುರ್ತಿ ರವರಿಗೆ ಪೂರ್ವ ಪಶ್ಚಿಮ ಉತ್ತರ ದಕ್ಷಿಣ ಆಸ್ತಿ ಎಷ್ಟು ಇದೆ ಎಂದರೆ ಗೊತ್ತಿಲ್ಲ. 2019 ಕ್ಕಿಂತ ಮೊದಲು ಯಾರ ಯಾರ ಆಸ್ತಿ ಎಷ್ಟೆಷ್ಟು ಅಳತೆ ಇದೆ ಅಂತ ಗೊತ್ತಿರುವುದಿಲ್ಲ. ರಸ್ತೆ ಅಂತ ಹೇಳುವ ಜಾಗ ಪ್ರತಿವಾದಿಯ ಖಾತೆಯಲ್ಲಿ ಇದೆಯೊ ಇಲ್ಲವೋ ನನಗೆ ಗೊತ್ತಿಲ್ಲ. ರಸ್ತೆಯ ಅಗಲ ಗೊತ್ತಿಲ್ಲ. ಪ್ರತಿವಾದಿ 3 ಮತ್ತು 4 ರವರು ಕೈಲಾಗದವರು ಯಾರ ಗಲಾಟೆಗೆ ಹೋಗುವುದಿಲ್ಲ ಎಂದರೆ ಹೌದು. ನಾನು ಖರೀದಿ ಮಾಡಿರುವ ಸೈಟಿನಲ್ಲಿ ಪಾಯ ಇದೆ. ಪೂರ್ವ ಪಶ್ಚಿಮ ಮತ್ತು ಉತ್ತರ ದಕ್ಷಿಣ ಎಷ್ಟು ಇದೆ ಎಂದರೆ 37 ಇಂಟು 67 ರಲ್ಲಿ ಮುಕ್ಕಾಲ ಭಾಗ ಕಟ್ಟಡ ಇದೆ. ಸೈಟಿನ ಉತ್ತರದ ಕಡೆ ಖಾಲಿ ಜಾಗ ಇರುತ್ತದೆ. ನಿಮಗೆ ಇ-ಖಾತೆ ಇಲ್ಲ ಎಂದು ಪಂಚಾಯ್ತಿಯವರು ನಿಮಗೆ ಹಿಂಬಹರ ನೀಡಿರುತ್ತಾರೆ ಎಂದರೆ ಸರಿ. ಇ-ಖಾತೆ ಮಾಡಬೇಕು ಅಂತ ಅರ್ಜಿ ನೀಡಿರುತ್ತೀರಾ ಎಂದರೆ ಹೌದು ಆದರೆ ನ್ಯಾಯಾಲಯದಲ್ಲಿ ದಾವೆ ಇದೆ ಅಂತ ನೀಡಿರುವುದಿಲ್ಲ. ಮಗೆ ಮಾರಾಟ ಮಾಡಿದ್ದಾರೆ ಅಂತ ಸೈಟ್ ಸೈಟಿನ ಮಾಲೀಕರಿಗೆ ಮಾರಾಟ ಮಾಡುವ ಯಾವುದೇ ಹಕ್ಕು ಸ್ವಾಧೀನ ಇರುವುದಿಲ್ಲ ಎಂದರೆ ನಮಗೆ ಮಾರಾಟ ಮಾಡಿದ್ದಾರೆ ಅಂತ ಹೇಳುವ ವೆಂಕಟರಾನಾರಾಯಣಪ್ಪ ಊರಿನ ಮುಖ್ಯಸ್ಥರು. ಅವರು ಯಾವ ರೀತಿ ಖಾತೆ ಮಾಡಿಕೊಂಡಿರುತ್ತಾರೆ ಅಂತ ಗೊತ್ತಿಲ್ಲ. ಊರಿನಲ್ಲಿ ದೊಡ್ಡವರಾಗಿದ್ದರಿಂದ ಖಾತೆ ಮಾಡಿಕೊಳ್ಳುವ ಅವಕಾಶ ಇತ್ತು. ವೆಂಕಟನಾರಾಯಣಪ್ಪ ನವರು ಹೇಗೆ ಖಾತೆ ಮಾಡಿಕೊಂಡು ನಮಗೆ ಮಾರಾಟ ಮಾಡಿತ್ತಾರೆ ಅಂತ ಗೊತ್ತಿಲ್ಲ. ನಾನು ಹುಟ್ಟಿದಾಗಿಂದ ಪ್ರತಿವಾದಿ 3 ಮತ್ತು 4 ರವರು ಅವರ ಸ್ವಾಧೀನದಲ್ಲಿ ಇರುತ್ತಾರೆ. ಅವರ ಆಸ್ತಿಯ ಉತ್ತರ ದಿಕ್ಕಿನ ಕೊನೆಗೆ ಶೆಡೆ ಇದೆ ಎಂದರೆ ಸರಿ. ಅವರಿಗೆ ಎಷ್ಟು

ಇದೆಯೋ ಆ ಜಾಗದ ಕೊನೆಯಲ್ಲಿ ಶೆಡ್ ಹಾಕಿರುತ್ತಾರೆ. ಆ ಶೆಡ್ ನ ಉತ್ತರಕ್ಕೆ ತೆಂಗಿನ ಮರ ಇದೆ ಎಂದರೆ ಸರಿ. ಶೆಡ್ ನ ಉತ್ತರಕ್ಕೆ ಎಷ್ಟು ದೂರದಲ್ಲಿ ತೆಂಗಿನ ಮರ ಇದೆ ಎಂದರೆ 10 ಅಡಿ ಅಂತರದಲ್ಲಿ ಇರುತ್ತದೆ. ತೆಂಗಿನ ಮರವನ್ನು 3 ಮತ್ತು 4 ನೇ ಪ್ರತಿವಾದಿಗಳು ಬೆಳೆಸಿರುತ್ತಾರೆ. ತೆಂಗಿನ ಮರದ ಉತ್ತರಕ್ಕೆ ಎಷ್ಟು ದೂರದಲ್ಲಿ ನಿಮ್ಮ ಜಾಗ ಬರುತ್ತದೆ ಎಂದರೆ ತೆಂಗಿನ ಮರ ಆದ ನಂತರ ರಸ್ತೆ ಮತ್ತು ಸೈಟು ಬರುತ್ತದೆ. ತಕಾರು ಬಂದ ನಂತರ ತಹಸೀಲ್ದಾರ್ ಮತ್ತು ರೆವಿನ್ಯೂ ಅಧಿಕಾರಿಗಳು ಬಂದು ಸೈಟ್ ಅನ್ನು ಅಳತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 3 ಮತ್ತು 4 ರವರಿಗೆ ಇ ಖಾತೆ ಆಗಿದೆ ಎಂದರೆ ಸರಿ. ಪೂರ್ವ ಪಶ್ಚಿಮ 29.08 ಮೀಟರ್ ಮತ್ತು ಉತ್ತರ ದಕ್ಷಿಣ 42/.06 ಮೀಟರ್ ಇದೆ ಎಂದರೆ ಇಲ್ಲ. ದಾಖಲೆಯಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ಖಾತೆ ಆಗಿರುವ ಬಗ್ಗೆ ತಕರಾರಿನಲ್ಲಿ ಹೇಳಿದ್ದು ಆ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ಅವರಿಗೆ ಆಗಿರುವ ಖಾತೆ ಬಗ್ಗೆ ನಾನು ತಕರಾರು ಹಾಕಿರುವುದಿಲ್ಲ. ಅವರ ತಾತನ ಕಾಲದಿಂದಲೂ ಪ್ರತಿವಾದಿ 3 ಮತ್ತು 4 ರವರು ಸ್ವಾಧೀನ ಇದ್ದಾರೆ ಎಂದರೆ ಸರಿ, ನಂತರ ನಾವೂ ಇದ್ದೇವೆ. ನಾನು ಖರೀದಿ ಮಾಡಿರುವ ಜಾಗದಲ್ಲಿ ಕಟ್ಟಡ ಕಟ್ಟಿರುವುದಿಲ್ಲ. ಮನೆ ಕಟ್ಟಿರುವ ಜಾಗ ನಿಮ್ಮದು ಎಂದು ತೋರಿಸಲು ದಾಖಲೆ ಇಲ್ಲ ಎಂದರೆ ದಾಖಲೆ ಇರುತ್ತದೆ. ಅದು ನಾನು ನ್ಯಾಯಾಲಯಕ್ಕೆ ನೀಡಿರುವ ದಾಖಲೆಯಾಗಿರುತ್ತದೆ. ನೀವು ಖರೀದಿ ಮಾಡಿದಂತಹ ಆಸ್ತಿಗೆ ತಪ್ಪು ಚೆಕ್ಕುಬಂದಿ ನೀಡಿರುತ್ತೀರಿ ಎಂದರೆ ಸರಿಯಲ್ಲ. ಯಾವುದೇ ರಸ್ತೆ ಇಲ್ಲ ಪ್ರತಿವಾದಿ 3 ಮತ್ತು 4 ರವರ ಆಸ್ತಿಯನ್ನು ಕಬಳಿಸಲು ಸುಳ್ಳು ಚೆಕ್ಕುಬಂದಿ ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿ 3 ಮತ್ತು 4 ರವರಿಗೆ ಬೆದರಿಕೆ ಹಾಕಿ ಆಸ್ತಿಯನ್ನು ಪಡೆಯಲು ಸುಳ್ಳು ದಾವೆ ಹಾಕಿರುತ್ತೀರಿ ಎಂದರೆ ಸರಿಯಲ್ಲ. ಕ್ರಯ ಪತ್ರ ಬರೆದುಕೊಳ್ಳಲು ಅವರಿಗೆ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.185 ರಲ್ಲಿ ರಸ್ತೆ ಇದೆ ಎಂದರೆ ನನಗೆ ಗೊತ್ತಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.